ದೂರವಾಣಿ : 080 - 2222 8263
2222 8264

ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ,
2ನೇ ಮಹಡಿ, ವನವಿಕಾಸ,
ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ

# ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

2ನೇ ಮಹಡಿ, ವನವಿಕಾಸ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.

ಸಂಖ್ಯೆ: STRRPA/TP/CC/209/2026-27/1306 ದಿನಾಂಕ: 28 AUG 2026

## "ಪ್ರಾರಂಭಿಕ ಪ್ರಮಾಣ ಪತ್ರ"

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೊಜನಾ ಕಾಯ್ದೆ 1961 ರ ಕಲಂ 15(1) ರನ್ವಯ)**

**(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳ 1965 ರ ನಿಯಮ 30 ನಮೂನೆ 3 ರನ್ವಯ)**

**ವಿಷಯ:** ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಭೋದನಹೊಸಹಳ್ಳಿ ಗ್ರಾಮದ ಸ.ನಂ. 116/4ರಲ್ಲಿ 0–12½ಗುಂಟೆ, 116/5ರಲ್ಲಿ 0–12½ಗುಂಟೆ, 116/6ರಲ್ಲಿ 0–12½ಗುಂಟೆ, 116/7ರಲ್ಲಿ 0–12½ಗುಂಟೆ, 117/7ರಲ್ಲಿ 0–08½ಗುಂಟೆ, 117/8ರಲ್ಲಿ 0–08½ಗುಂಟೆ, 117/9ರಲ್ಲಿ 0–08¼ಗುಂಟೆ, 117/10ರಲ್ಲಿ 0–25ಗುಂಟೆ, 118ರಲ್ಲಿ 0–16ಗುಂಟೆ, 120/1ರಲ್ಲಿ 0–26½ಗುಂಟೆ, 120/2ರಲ್ಲಿ 0–38¾ಗುಂಟೆ, 120/3ರಲ್ಲಿ 0–18ಗುಂಟೆ, 120/4ರಲ್ಲಿ 0–18ಗುಂಟೆ, 120/5ರಲ್ಲಿ 0–02ಗುಂಟೆ, 120/6ರಲ್ಲಿ 0–25½ಗುಂಟೆ, 120/7ರಲ್ಲಿ 0–25½ಗುಂಟೆ, 120/8ರಲ್ಲಿ 0–20ಗುಂಟೆ, 120/9ರಲ್ಲಿ 0–12ಗುಂಟೆ, 120/10ರಲ್ಲಿ 0–06¾ಗುಂಟೆ, 121/1ರಲ್ಲಿ 0–32½ಗುಂಟೆ, 121/2ರಲ್ಲಿ 0–06ಗುಂಟೆ, 121/3ರಲ್ಲಿ 0–32½ಗುಂಟೆ, 121/4ರಲ್ಲಿ 0–14ಗುಂಟೆ, 121/5ರಲ್ಲಿ 0–20ಗುಂಟೆ, 121/6ರಲ್ಲಿ 0–08ಗುಂಟೆ, 121/7ರಲ್ಲಿ 0–08ಗುಂಟೆ, 121/8ರಲ್ಲಿ 0–03½ಗುಂಟೆ, 121/9ರಲ್ಲಿ 0–14ಗುಂಟೆ, 121/10ರಲ್ಲಿ 0–14ಗುಂಟೆ, 121/11ರಲ್ಲಿ 0–14ಗುಂಟೆ, 121/12ರಲ್ಲಿ 0–03ಗುಂಟೆ, 121/13ರಲ್ಲಿ 0–03ಗುಂಟೆ, 121/14ರಲ್ಲಿ 0–03ಗುಂಟೆ, 121/15ರಲ್ಲಿ 0–06½ಗುಂಟೆ, 122/1ರಲ್ಲಿ 0–10½ಗುಂಟೆ, 122/2ರಲ್ಲಿ 0–29ಗುಂಟೆ, 122/3ರಲ್ಲಿ 0–25ಗುಂಟೆ, 122/4ರಲ್ಲಿ 0–39½ಗುಂಟೆ, 123/1ರಲ್ಲಿ 0–32ಗುಂಟೆ, 123/3ರಲ್ಲಿ 0–25ಗುಂಟೆ, 123/4ರಲ್ಲಿ 0–25ಗುಂಟೆ, ಹೆಮ್ಮಂಡಹಳ್ಳಿ ಗ್ರಾಮದ 53/2ರಲ್ಲಿ 1ಎಕರೆ–26½ಗುಂಟೆ, 55/3ರಲ್ಲಿ 0–20ಗುಂಟೆ ಮತ್ತು ನಾಗನಾಯಕನಕೋಟೆ ಗ್ರಾಮದ ಸ.ನಂ. 7/1ರಲ್ಲಿ 0–25ಗುಂಟೆ ಒಟ್ಟು 19ಎಕರೆ–28¾ಗುಂಟೆ ಪೈಕಿ ಅನುಭವದಲ್ಲಿರುವ 19ಎಕರೆ–08¼ಗುಂಟೆ ವಿಸ್ತೀರ್ಣದ ಅನುಮೋದಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯ ಸ್ವತ್ತಿನ ಸಂಖ್ಯೆ: 150300402000420316ರ 61439.00ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ಬಿಲ್ಡಿಂಗ್–01 ರಿಂದ ಬಿಲ್ಡಿಂಗ್–13ರಲ್ಲಿ ನೆಲ+03 ಅಂತಸ್ತುಗಳು+ಟೆರಸ್ ಒಳಗೊಂಡಂತೆ ಒಟ್ಟು 242 ವಸತಿ ಘಟಕಗಳ ಕಟ್ಟಡಗಳನ್ನು ನಿರ್ಮಿಸಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

**ಉಲ್ಲೇಖ:** 1. ಈ ಪ್ರಾಧಿಕಾರದಿಂದ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಿದ ಆದೇಶ ಪತ್ರ ಸಂಖ್ಯೆ: STRRPA/TP/DP/18/2025-26 ದಿನಾಂಕ: 09.07.2026

2. ಅರ್ಜಿದಾರರ ಮನವಿ ದಿನಾಂಕ: 14.07.2026.
3. ಕಟ್ಟಡ ನಕ್ಷೆಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಪೂರ್ವ ಸಮ್ಮತಿಗಾಗಿ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರಿಗೆ ಕಡತ ಸಲ್ಲಿಸಿದ ದಿನಾಂಕ: 10.08.2026
4. ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರು ಸಮ್ಮತಿ ನೀಡಿದ ದಿನಾಂಕ: 13.08.2026
5. ಈ ಕಛೇರಿ ಸಮ ಸಂಖ್ಯೆಯ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 24.08.2026.
6. ಅರ್ಜಿದಾರರು ಶುಲ್ಕಗಳನ್ನು ರಶೀದಿ ಸಂಖ್ಯೆ: 7607ರ ದಿನಾಂಕ: 27.08.2026ರಂತೆ ಪಾವತಿಸಿರುತ್ತಾರೆ.

******************

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರಂತೆ ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಭೋದನಹೊಸಹಳ್ಳಿ ಗ್ರಾಮದ ಸ.ನಂ. 116/4, 116/5, 116/6, 116/7, 117/7, 117/8, 117/9 ಮತ್ತು ಇತರೆ ಹಾಗೂ ಹೆಮ್ಮಂಡಹಳ್ಳಿ ಗ್ರಾಮದ 53/2, 55/3 ಮತ್ತು ನಾಗನಾಯಕನಕೋಟೆ ಗ್ರಾಮದ ಸ.ನಂ. 7/1ರಲ್ಲಿ ಒಟ್ಟು 19ಎಕರೆ-28¾ಗುಂಟೆ ಪೈಕಿ ಅನುಭವದಲ್ಲಿರುವ 19ಎಕರೆ-08¼ಗುಂಟೆ ವಿಸ್ತೀರ್ಣ ಪ್ರದೇಶಕ್ಕೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ. ಉಲ್ಲೇಖ (2)ರಲ್ಲಿ ಮೆ॥ ಗೋದ್ರೇಜ್ ಪ್ರಾಪರ್ಟೀಸ್ ಲಿಮಿಟೆಡ್.. ರವರು ಈಗಾಗಲೇ ಅನುಮೋದನೆಯಾಗಿರುವ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಂತೆ ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಭೋದನಹೊಸಹಳ್ಳಿ ಗ್ರಾಮದ ಸ.ನಂ. 116/4, 116/5, 116/6, 116/7, 117/7, 117/8, 117/9 ಮತ್ತು ಇತರೆ ಹಾಗೂ ಹೆಮ್ಮಂಡಹಳ್ಳಿ ಗ್ರಾಮದ 53/2, 55/3 ಮತ್ತು ನಾಗನಾಯಕನಕೋಟೆ ಗ್ರಾಮದ ಸ.ನಂ. 7/1ರಲ್ಲಿ ಒಟ್ಟು 19ಎಕರೆ-28¾ಗುಂಟೆ ಪೈಕಿ ಅನುಭವದಲ್ಲಿರುವ 19ಎಕರೆ-08¼ಗುಂಟೆ ವಿಸ್ತೀರ್ಣದ ಅನುಮೋದಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯ ಸ್ವತ್ತಿನ ಸಂಖ್ಯೆ: 150300402000420316ರ 61439.00ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ಬಿಲ್ಡಿಂಗ್-01 ರಿಂದ ಬಿಲ್ಡಿಂಗ್-13ರಲ್ಲಿ ನೆಲ+03 ಅಂತಸ್ತುಗಳು+ಟೆರಸ್ ಒಳಗೊಂಡಂತೆ ಒಟ್ಟು 242 ವಸತಿ ಘಟಕಗಳ ಕಟ್ಟಡಗಳನ್ನು ನಿರ್ಮಿಸುವ ಸಂಬಂಧ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ : ಯುಡಿಡಿ234ಬಿಎಂಆರ್2023, ದಿನಾಂಕ: 20/11/2023 ರಂತೆ ಅನುಮೋದನೆಯಾದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಿಯಮಗಳು 2020 ರಲ್ಲಿನ ನಿಯಮ 18 (5) ರನ್ವಯ ಮತ್ತು ದಿನಾಂಕ: 27/12/2023 & 03/02/2024 ರಂದು ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಅಧಿಕೃತ ಜ್ಞಾಪನಾ ಪತ್ರದಲ್ಲಿ ಸೂಚಿಸಿರುವಂತೆ ಸದರಿ ಕಟ್ಟಡ ನಕ್ಷೆಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಂಬಂಧ ಉಲ್ಲೇಖ (3) ರಂತೆ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರನ್ನು ಪೂರ್ವ ಸಮ್ಮತಿಯನ್ನು ಕೋರಲಾಗಿದ್ದು, ಉಲ್ಲೇಖ (4) ರಂತೆ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರು ಹಲವು ಷರತ್ತುಗಳಿಗೆ ಒಳಪಟ್ಟು ಕಟ್ಟಡ ನಕ್ಷೆಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಪೂರ್ವ ಸಮ್ಮತಿ ನೀಡಿರುತ್ತಾರೆ.

ಉಲ್ಲೇಖ (5)ರ ಈ ಕಛೇರಿ ಪತ್ರದಲ್ಲಿ ಅಗತ್ಯ ಶುಲ್ಕಗಳನ್ನು ಪಾವತಿಸಲು ಹಾಗೂ ಸಲ್ಲಿಸಿರುವ ಕಟ್ಟಡ ನಕ್ಷೆಯಲ್ಲಿ ಇರುವ ನ್ಯೂನ್ಯತೆಗಳನ್ನು ವಲಯ ನಿಯಮಾವಳಿಗಳಂತೆ ಸರಿಪಡಿಸಿ ನೀಲಿ ನಕ್ಷೆಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು.

3..

ಉಲ್ಲೇಖ (6) ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿ, ಉದ್ದೇಶಿತ ಕಟ್ಟಡಗಳ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಗಿನ ನಿಬಂಧನೆಗಳೊಂದಿಗೆ ನೀಡಲಾಗಿದೆ.

**ನಿಬಂಧನೆಗಳು**

1. ಈ ಪ್ರಾಧಿಕಾರದ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಿದ ಆದೇಶ ಪತ್ರ ಸಂಖ್ಯೆ: STRRPA/TP/DP/18/2025-26 ದಿನಾಂಕ:09.07.2026ರ ಆದೇಶದಲ್ಲಿನ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.
2. ಯೋಜಿಸಿರುವ ಕಟ್ಟಡವನ್ನು ವಸತಿ ಉದ್ದೇಶಕ್ಕಾಗಿಯೇ ಉಪಯೋಗಿಸತಕ್ಕದ್ದು.
3. ಈ ಪ್ರಾರಂಭಿಕ ಪ್ರಮಾಣ ಪತ್ರವನ್ನು ಎರಡು ವರ್ಷದ ಅವಧಿಗೆ ಅಂದರೆ **ದಿನಾಂಕ:27.08.2026** ರಿಂದ **26.08.2028** ರವರೆಗೆ ಮಾತ್ರ ನೀಡಲಾಗಿರುತ್ತದೆ.
4. ವಸತಿ ಉಪಯೋಗದ ಕಟ್ಟಡವನ್ನು ನಿರ್ಮಿಸಲು ಪರವಾನಿಗೆಯನ್ನು **ಮುತ್ಸಂದ್ರ** ಗ್ರಾಮ ಪಂಚಾಯಿತಿಯಿಂದ ಪಡೆಯಬೇಕು.
5. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಅಧಾರದ ಮೇಲೆ ಅವಶ್ಯಕ ಇತರೆ ಪರವಾನಿಗೆಯನ್ನು **ಮುತ್ಸಂದ್ರ** ಗ್ರಾಮ ಪಂಚಾಯ್ತಿರವರಿಂದ ಪಡೆಯದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದು.
6. ವಸತಿ ಉಪಯೋಗದ ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ನಿರ್ಮಿಸಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಯಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯನ್ನು ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.
7. ವಸತಿ ಉಪಯೋಗದ ಕಟ್ಟಡ ನಿರ್ಮಿಸಲು ನಕ್ಷೆಯಲ್ಲಿ ಬಿಟ್ಟಿರುವಂತೆ ನಡುಜಾಗವನ್ನು ಬಿಟ್ಟು ಕಟ್ಟಡ ನಿರ್ಮಿಸತಕ್ಕದ್ದು.
8. ವಸತಿ ಉಪಯೋಗದ ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.
9. ವಸತಿ ಉಪಯೋಗದ ಕಟ್ಟಡದ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.
10. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮುತ್ಸಂದ್ರ ಗ್ರಾಮ ಪಂಚಾಯಿತಿ ಇವರ ಪತ್ರ ಸಂಖ್ಯೆ: ಮು.ಗ್ರಾ.ಪಂ/014/ 2026-27 ದಿನಾಂಕ:06.05.2026 ರಂದು ಕುಡಿಯು ನೀರಿನ ಬಗ್ಗೆ ಅನುಮತಿ ಪತ್ರ ನಿಡಿರುತ್ತಾರೆ.
11. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ನಿ) ರವರ ಪತ್ರ ಸಂಖ್ಯೆ: CEBRAZ/SEO/AEE-2/2026-27/3013-16 Date:07.07.2026 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

12. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ ರವರ ಪತ್ರ ಸಂಖ್ಯೆ: CTE-354435/PCBID-304358 Date:18.06.2026ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
13. State Level Environment Impact Assessment Authority-Karnataka ರವರ ಪತ್ರ ಸಂಖ್ಯೆ: SEIAA 137 CON 2026 Date:06.06.2026ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
14. ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ-2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.
15. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rain Water harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಗಿಡ/ಮರವನ್ನು ಬೆಳೆಸತಕ್ಕದ್ದು.
16. ಈ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.
17. ಈ ಪ್ರಾರಂಭಿಕ ಪ್ರಮಾಣ ಪತ್ರದೊಡನೆ ಅನುಮೋದಿಸಲ್ಪಟ್ಟಿರುವ ನಕ್ಷೆಯು ಕಟ್ಟಡದ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.
18. ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳತಕ್ಕದಲ್ಲ ಹಾಗೂ ಕಾರ್ಮಿಕರ ಕಲ್ಯಾಣ ನಿಧಿಗೆ ಪಾವತಿಸಬೇಕಾದ ಶುಲ್ಕವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ಪರವಾನಗಿ ಪಡೆಯುವ ಸಮಯದಲ್ಲಿ ಕಡ್ಡಾಯವಾಗಿ ಪಾವತಿಸತಕ್ಕದ್ದು.
19. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಸಂಪರ್ಕ ರಸ್ತೆಯ ಬಗ್ಗೆ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ನೀವೇ ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.
20. ಈ ಅನುಮತಿಯನ್ನು ಉಲ್ಲಂಘಿಸಿ ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷ ಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
21. ಈ ಅನುಮೋದನೆ ಸಂಬಂಧಿಸಿದಂತೆ ಲೆಕ್ಕ ತಪಾಸಣೆ ವೇಳೆಯಲ್ಲಿ ಆಕ್ಷೇಪಣೆ ಬಂದಲ್ಲಿ ಆಕ್ಷೇಪಣಾ ಮೊಬಲಗನ್ನು ಅರ್ಜಿದಾರರೇ ಪಾವತಿಸುವ ಷರತ್ತಿಗೊಳಪಡಿಸಿದೆ.
22. ವಸತಿ ಉಪಯೋಗದ ಕಟ್ಟಡ ಅನುಮೋದನೆ ಸಂಬಂಧ ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.
23. ಪ್ರಶ್ನಿತ ಜಮೀನುಗಳಲ್ಲಿರುವ ಖರಾಬು ಪ್ರದೇಶಗಳನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು.
24. ಪ್ರಶ್ನಿತ ಜಮೀನಿಗೆ ಹೊಂದಿಕೊಂಡಿರುವ ನಾಲಾ/ಹಳ್ಳಕ್ಕೆ/ಕೆರೆಗೆ ಅಗತ್ಯ ಬಫರ್ ಅನ್ನು ಅಳವಡಿಸತಕ್ಕದ್ದು.

25. ಸದರಿ ಪ್ರಾರಂಭಿಕ ಪ್ರಮಾಣ ಪತ್ರವು ಹಾಲಿ ಕಟ್ಟಡಗಳಿದ್ದಲ್ಲಿ ಅನ್ವಯವಾಗುವುದಿಲ್ಲ.
26. ರಸ್ತೆ ಪರಿಚಲನೆ ನಕ್ಷೆಯಂತೆ ಪ್ರಸ್ತಾಪಿತ ಜಮೀನಿನಲ್ಲಿ ಯಾವುದಾದರೂ ಉದ್ದೇಶಿತ ರಸ್ತೆ ಹಾದುಹೋಗಿದ್ದಲ್ಲಿ ಸದರಿ ರಸ್ತೆಯನ್ನು ಯಥಾವತ್ತಾಗಿ ಕಾಯ್ದಿರಿಸುವ ಷರತ್ತಿಗೊಳಪಟ್ಟಿರುತ್ತದೆ.
27. ಅರ್ಜಿದಾರರು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಫೋರ್ಜರಿಗಳಾಗಿದ್ದರೆ/ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ/ ಅನುಮೋದಿತ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಕೈಗೊಂಡಲ್ಲಿ, ಯೋಜನಾ ಪ್ರಾಧಿಕಾರವು ನೀಡಿರುವ ಅನುಮೋದನೆಯು ತನ್ನಿಂದತಾನೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

28/08/2024

**ಸದಸ್ಯ ಕಾರ್ಯದರ್ಶಿಗಳು**
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ
ಪ್ರಾಧಿಕಾರ, ಬೆಂಗಳೂರು.

**ಇವರಿಗೆ:**
ಮೆ॥ ಗೋದ್ರೇಜ್ ಪ್ರಾಪರ್ಟೀಸ್ ಲಿಮಿಟೆಡ್.,
ನಂ.4 & 5, 9ನೇ ಮಹಡಿ,
ಗೋದ್ರೇಜ್ ಸೆಂಟರ್ ಇಂದಿರಾನಗರ್,
ಬಿಎಂ ಕಾವಲ್, ನಂ.1-15,
ಹಳೇ ಮದ್ರಾಸ್ ರಸ್ತೆ, ಬೆಂಗಳೂರು-560 038.

**<u>ಯಥಾ ಪ್ರತಿಯನ್ನು:</u>**

1. ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2ನೇ ಮಹಡಿ, ಸಿಲ್ವರ್ ಬ್ಲಾಕ್, ಯೂನಿಟಿ ಬಿಲ್ಡಿಂಗ್ ಹಿಂಭಾಗ, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು. ಇವರಿಗೆ ಅನುಮೋದಿತ ನಕ್ಷೆ ಪ್ರತಿಯೊಂದಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು,** ಮುತ್ಸಂದ್ರ ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು ಇವರಿಗೆ ಕಟ್ಟಡ ನಕ್ಷೆಯ ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ಕಛೇರಿ ಪ್ರತಿ.